(ಇವರ ಪೈಕಿ 4308 ಉದ್ಯೋಗಿಗಳನ್ನು ಸ್ವಯಂ ನಿವೃತ್ತಿ ರಿಟ್ರೆಂಚ್‌ಮೆಂಟ್ ಮೂಲಕ ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ)

ಖ) ರಾಜ್ಯದಲ್ಲಿ ಜನವರಿ 2000 ದಿಂದ ಡಿಸೆಂಬರ್ 2003ರವರೆಗೆ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿಯು 610 ಯೋಜನೆಗಳಿಗೆ (ರೂ 50 00 ಕೋಟಿಗಳವರೆಗೆ) ರೂ 11037 12 ಕೋಟಿಗಳಿಗೆ ಅನುಮೋದನೆ ನೀಡಿದ್ದು ಇದರಲ್ಲಿ 120 ಕೈಗಾರಿಕೆಗಳು ರೂ 1637 72 ಕೋಟಿಗಳ ಬಂಡವಾಳ ಹೂಡಿ ಕಾರ್ಯಾರಂಭಗೊಂಡಿವೆ ಇದರಿಂದ 37290 ಜನರಿಗೆ ಉದ್ಯೋಗಾವಕಾಶ ನೀಡಲಾಗಿದೆ

ಉನ್ನತ ಮಟ್ಟದ ಸಮಿತಿಯು 140 ಯೋಜನೆಗಳಿಗೆ ರೂ 50 00 ಕೋಟಿಗಳಿಗೆ ಮೇಲ್ಪಟ್ಟು) ರೂ 55849-12 ಕೋಟಿಗಳಿಗೆ ಅನುಮೋದನೆ ನೀಡಿದ್ದು 18 ಕೈಗಾರಿಕೆಗಳು ರೂ 5043 57 ಕೋಟಿಗಳ ಬಂಡವಾಳ ಹೂಡಿ ಕಾರ್ಯಾರಂಭಗೊಂಡಿವೆ ಇದರಿಂದ 7960 ಜನರಿಗೆ ಉದ್ಯೋಗಾವಕಾಶ ನೀಡಲಾಗಿದೆ

ಗ) ರಾಜ್ಯ ಸರ್ಕಾರದ 2001-2006 ಕೈಗಾರಿಕಾ ನೀತಿಯ ಪ್ರಕಾರ ರಾಜ್ಯದಲ್ಲಿ ಸ್ಥಾಪನೆಗೊಳ್ಳುವ ಕೈಗಾರಿಕಗಳಿಗೆ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ನೀಡಲಾಗುತ್ತಿದೆ ರಾಜ್ಯದಲ್ಲಿ ಪ್ರಾರಂಭಗೊಳ್ಳುತ್ತಿರುವ ಘಟಕಗಳ ಯೋಜನಾ 3 00 ಕೋಟಿಯಿಂದ 50 00 ಕೋಟಿಗಳವರೆಗೆ ಬಂಡವಾಳ ಹೂಡುವ ಘಟಕಗಳಿಗೆ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಮುಖಾಂತರ ಮತ್ತು 50-00 ಕೋಟಿ ಮೇಲ್ಪಟ್ಟು ಬಂಡವಾಳ ಹೂಡುವ ಘಟಕಗಳಿಗೆ ಉನ್ನತ ಮಟ್ಟದ ಸಭೆಗಳಲ್ಲಿ ಅನುಮೋದನೆಗೊಳಿಸುವ ಕಾರ್ಯಕ್ರಮವು ಪ್ರಗತಿಯಲ್ಲಿದ್ದು ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಪ್ರೋತ್ಸಾಹದಾಯಕವಾಗಿರುತ್ತದೆ ಇದಲ್ಲದೆ ಕೈಗಾರಿಕಾ ಟೌನ್‌ಶಿಪ್ ಸ್ಥಾಪಿಸುವ ಯೋಜನೆಯು ಪ್ರಗತಿಯಲ್ಲಿರುತ್ತದೆ ರಾಜ್ಯದಲ್ಲಿ ಹೆಚ್ಚು ಬಂಡವಾಳ ಹೂಡಿಕೆಗೆ ಸಹಾಯಕವಾಗುವಂತೆ ಬಂಡವಾಳ ಹೂಡಿಕೆ ಸಮಾವೇಶಗಳನ್ನು ಹಮ್ಮಿಕೊಳ್ಳುತ್ತಿರುವುದೇ ಅಲ್ಲದೆ ಹೊರ ರಾಜ್ಯ ಹಾಗೂ ಇತರೆ ದೇಶಗಳಿಂದ ಬಂಡವಾಳ ಆಕರ್ಷಿಸುವ ಕಾರ್ಯಕ್ರಮಗಳನ್ನೂ ಸಹ ಹಮ್ಮಿಕೊಳ್ಳಲಾಗಿದೆ ಹಾಸನ ಜಿಲ್ಲೆಯಲ್ಲಿ ವಿಶೇಷ ಹಾಗೂ ಆರ್ಥಿಕ ವಲಯ ಹಾಗೂ ರಾಜ್ಯದಲ್ಲಿ 6 ಸ್ಥಳಗಳಲ್ಲಿ ಆಹಾರ ಸಂಸ್ಕರಣ ಪಾರ್ಕ್‌ಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಈ ರೀತಿಯ ಕಾರ್ಯಕ್ರಮಗಳಿಂದ ಸ್ಥಾಪಿಸಲ್ಪಡುತ್ತಿರುವ ಕೈಗಾರಿಕೆಗಳಿಂದ ರಾಜ್ಯದಲ್ಲಿ ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳು ದೊರೆಯುತ್ತದೆ

ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಮುಚ್ಚುತ್ತಿರುವುದು

241 (45) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳನ್ನು ಮುಚ್ಚಬೇಕೆಂಬ ವಿಷಯ ಸರ್ಕಾರದ ಮುಂದೆ ಇದೆ ಅವುಗಳ ಹೆಸರು ಹಾಗೂ ವಿಳಾಸ ನೀಡುವುದು

ಆ) ಈ ಸಕ್ಕರೆ ಕಾರ್ಖಾನೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು

ಇ) ಈ ಮುಚ್ಚುವ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಕಾರ್ಮಿಕರಿಗೆ ಹಾಗೂ ವಿವಿಧ ಬ್ಯಾಂಕುಗಳಿಗೆ ಎಷ್ಟು ಮೊತ್ತವನ್ನು ಕೊಡಬೇಕಾಗಿರುವುದು?

ಶ್ರೀ ಎಂ ಮಹಾದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿರುವ ಸಹಕಾರಿ ರಂಗದ ಸಕ್ಕರೆ ಕಾರ್ಖಾನೆಗಳ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಿ ಪರಿಹಾರ ಸೂಚಿಸಿ ವರದಿ ನೀಡುವಂತೆ ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಆದೇಶ ಸಂಖ್ಯೆ ಡಿಇಎ (ಸಿಎಸ್‌ಸಿ) 1 2003 ದಿನಾಂಕ 09–01–2003 ರನ್ವಯ ಸರ್ಕಾರವು ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯು ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಇನ್ನೂ ಅಂತಿಮ ತೀರ್ಮಾನವಾಗಿರುವುದಿಲ್ಲ

ಆ) ಸರ್ಕಾರದ ಅಂತಿಮ ತೀರ್ಮಾನದ ಪ್ರಕಾರ ಮುಂದಿನ ಕ್ರಮ ವಹಿಸಲಾಗುವುದು

ಇ) ಸರ್ಕಾರ್ದ ಅಂತಿಮ ತೀರ್ಮಾನದ ಪ್ರಕಾರ ಸೂಕ್ತ ಕ್ರಮ ವಹಿಸಲಾಗುವುದು

ವೀರಶೈವ ಪಂಚಮಸಾಲ ಸಮಾಜವನ್ನು ಹಿಂದುಳಿದ ವರ್ಗಕ್ಕೆ ಸೆರಿಸುವುದು

242 (46) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವೀರಶೈವ ಪಂಚಮ ಸಾಲಿನ ಸಮಾಜವನ್ನು ಹಿಂದುಳಿದ ವರ್ಗಕ್ಕೆ ಸೇರಿಸಬೇಕೆಂದು ಮನವಿಗಳು ಸರ್ಕಾರಕ್ಕೆ ಬಂದಿವೆಯೇ

ಆ) ಹಾಗಿದ್ದಲ್ಲಿ, ಈ ಸಮಾಜವನ್ನು ಹಿಂದುಳಿದ ವರ್ಗಕ್ಕೆ ಸೇರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು,

ಇ) ಈ ಸಮಾಜದ ಜನರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಉಳಿದ ಸಮಾಜದವರಿಗಿಂತಲೂ ಹಿಂದುಳಿದವರಾಗಿದ್ದು, ಇವರನ್ನು ಕೂಡಲೇ ಹಿಂದುಳಿದ ವರ್ಗಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲು ಕ್ರಮ ಕೈಗೊಳ್ಳಲಾಗುವುದೇ

ಈ) ರಾಜ್ಯದಲ್ಲಿ ಎಷ್ಟು ಜನ ವೀರಶೈವ ಪಂಚಮಸಾಲಿ ಸಮಾಜದವರು ಇರುತ್ತಾರೆ?

ಶ್ರೀ ಎ ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಆ) ಈ ಮನವಿಗಳನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಪರಿಶೀಲಿಸುತ್ತಿದ್ದು, ಆಯೋಗದಿಂದ ವರದಿ ಬಂದ ನಂತರ ಸರ್ಕಾರವು ಪರಿಶೀಲಿಸಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುವುದು

ಇ) ಈ ಬಗ್ಗೆ ಮನವಿಗಳು ಬಂದಲ್ಲಿ ಸರ್ಕಾರವು ಅದನ್ನು ಪರಿಶೀಲಿಸುತ್ತದೆ

ಈ) ಜಸ್ಟೀಸ್ ಓ ಚಿನ್ನಪ್ಪರೆಡ್ಡಿಯವರ ವರದಿಯನ್ವಯ ರಾಜ್ಯದಲ್ಲಿ 1988ನೇ ಸಾಲಿನಲ್ಲಿ 67,62, 703 ಲಿಂಗಾಯಿತರ ಜನಸಂಖ್ಯೆ ಲಭ್ಯವಿರುತ್ತದೆ ಆದರೆ ವೀರಶೈವ ಪಂಚಮಸಾಲಿ ಸಮಾಜದ ಪ್ರತ್ಯೇಕ ಜನಗಣತಿ ಮಾಡದೇ ಇರುವುದರಿಂದ ಇವರ ಸಂಖ್ಯೆ ಸರ್ಕಾರದಲ್ಲಿ ಲಭ್ಯವಿರುವುದಿಲ್ಲ

ರಾಜ್ಯದಲ್ಲಿ ರೇಷ್ಮೆ ಕಾರ್ಖಾನೆಗಳ ಪುನಶ್ಚೇತನ

243 (541) ಶ್ರೀ ಎ ಆರ್ ಕೃಷ್ಣಮೂರ್ತಿ (ಸಂತೇಮರಳ್ಳಿ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?